

ಹೊಂದುತ್ತ ಬಹಳ ಕಡೆ ಸೇವೆ ಸಲ್ಲಿಸಿದ್ದರು. 4 ವರ್ಷ ಶಿರಸಿಯಲ್ಲಿ ಕಳೆದು, 1952ರಲ್ಲಿ ನಿವೃತ್ತರಾದ ನಂತರ ಧಾರವಾಡದ ಸಾರಸ್ವತಪುರದಲ್ಲಿ ನೆಲೆಸಿದ್ದರು. ಅವರು ಕೃಷ್ಣಾಬಾಯಿ ಗೋಕರ್ಣ ಅವರನ್ನು 1931ರಲ್ಲಿ ಮದುವೆಯಾದರು. ಅದು ವಿಧವಾವಿವಾಹ. ಆ ಕಾಲದಲ್ಲಿ ಸಂಬಂಧಿಕರು, ಪರಿಚಿತರಲ್ಲಿ ಈ ವಿವಾಹ ಸಾಕಷ್ಟು ಗೊಂದಲ ಮೂಡಿಸಿತ್ತು. ಸಾರಸ್ವತ ಬ್ರಾಹ್ಮಣರಾದ ಕಾರ್ನಾಡರನ್ನು ನಮ್ಮ ಭಾಗದ ದೇಶಸ್ಥ ಬ್ರಾಹ್ಮಣರೂ ಆಗ ಸ್ವಲ್ಪ ಅಂತರದಿಂದಲೇ ಕಾಣುತ್ತಿದ್ದರು. ಅದು ನಿಧಾನ ಬದಲಾಯಿತು. ಕೊನೆಕೊನೆಗೆ ರಘುನಾಥರು ಆರ್ಯ ಸಮಾಜದ ದಯಾನಂದ ಸರಸ್ವತಿ ಮತ್ತು ಪ್ರಾರ್ಥನಾ ಸಮಾಜದ ರಾನಡೆಯವರನ್ನು ಮನ್ನಿಸತೊಡಗಿದ್ದರು.

***

ರಘುನಾಥರು ಮಾಥೇರಾನ್‌ದಲ್ಲಿ ವೈದ್ಯರಾಗಿದ್ದರು, ಗಿರೀಶ ಅಲ್ಲಿ ಜನಿಸಿದರು. ಗಿರೀಶರಿಗೆ ಆ ಊರಿನ ಜೊತೆಗಿದ್ದುದು 18 ದಿನಗಳ ಸಂಬಂಧ ಮಾತ್ರ. ರಘುನಾಥರು ನಂತರ ಪುಣೆಗೆ ವರ್ಗವಾದರು. ಗಿರೀಶ ನಾಲ್ಕು ವರ್ಷದವರಿದ್ದಾಗಲೇ ಪುಣೆಯಲ್ಲಿ 'ಬಿನ್ನೇತ್ತ'ಕ್ಕೆ ಹೆಸರು ಹಚ್ಚಲಾಗಿತ್ತು. ಒಂದು ವರ್ಷದ ಅಲ್ಲಿಯ ಕಲಿಕೆ ಮರಾಠಿಯಲ್ಲಿತ್ತು. ನಂತರದ ಶಿಕ್ಷಣ ಶಿರಸಿ ಮತ್ತು ಧಾರವಾಡಗಳಲ್ಲಿ, ಕನ್ನಡ ಮಾಧ್ಯಮದಲ್ಲಿ ನಡೆಯಿತು. ಬೇರೆ ಬೇರೆ ಊರುಗಳಲ್ಲಿ ಜನಿಸಿದ, ಕಲಿತ ರಘುನಾಥರ ಮಕ್ಕಳು ವಿವಿಧ ಭಾಷೆಗಳನ್ನು ಕಲಿತಿದ್ದಾರೆ. ಮನೆಯಲ್ಲಿ ಮಾತ್ರ ಎಲ್ಲರೂ ಕೊಂಕಣಿ ಮತ್ತು ಕನ್ನಡವನ್ನೇ ಬಳಸುತ್ತ ಬಂದಿದ್ದಾರೆ.

ಗಿರೀಶ ಶಿರಸಿಯಲ್ಲಿ 1ನೇತ್ತದಿಂದ 9ನೇತ್ತದ ತನಕ (1943–1952) ಕನ್ನಡ ಮಾಧ್ಯಮದಲ್ಲಿ ಕಲಿತರು. ಊರಿನ ಸರಕಾರಿ ಡಾಕ್ಟರರ ಜಾಣ ಮಗನಾಗಿದ್ದರಿಂದ